◆ **ಹೈಸ್ಕೂಲು ಶಿಕ್ಷಣಕ್ಕೆ ಕಾಲಿಡುವ ವೇಳೆಗೆ ನೀವು ನಿಮ್ಮ ಅಸ್ತಿತ್ವದ ಹುಡುಕಾಟ ಆರಂಭಿಸಿದ್ದಿರಿ. ಅಂತಹ ಗೊಂದಲದ ಸ್ಥಿತಿಯಲ್ಲಿ ಭರತನಾಟ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳಲು ನಿರ್ದಿಷ್ಟ ಕಾರಣಗಳಿದ್ದವೇ?**

ಕಾರಣಗಳನ್ನು ಹುಡುಕುವಷ್ಟು ತಿಳಿವಳಿಕೆ ನನಗಿರಲಿಲ್ಲ. ನನ್ನ ಬದುಕಿನಲ್ಲಿ ಎರಡು ಪ್ರಶ್ನೆಗಳಿಗೆ ಇಂದಿಗೂ ಉತ್ತರ ಸಿಕ್ಕಿಲ್ಲ. ನನ್ನೊಳಗೆ ಹೆಣ್ತನವಿದೆ ಎಂದು ನಾನು ಯಾವಾಗ ಗುರುತಿಸಿಕೊಂಡೆ ಎಂಬುದು ನನಗೆ ಗೊತ್ತಿಲ್ಲ. ಎರಡನೆಯದು, ಭರತನಾಟ್ಯ ನೃತ್ಯವು ನನಗೇಕೆ ಇಷ್ಟವೆಂಬುದು ನನಗೆ ಗೊತ್ತಿಲ್ಲ. ಆದರೆ, ಇವೆರಡೂ ವಿಚಾರಗಳು ಒಂದಕ್ಕೊಂದು ಪೂರಕವಾಗಿದ್ದುಕೊಂಡು ನನ್ನ ಜೀವನವನ್ನು ಸಾರ್ಥಕಗೊಳಿಸಿವೆ. ಇವೆರಡೂ ನನ್ನನ್ನು ಸಂತೃಪ್ತಿಗೊಳಿಸುತ್ತವೆ. ಹೆಣ್ತನವೆಂಬುದು ಪಾತ್ರೆಯಾದರೆ, ಭರತನಾಟ್ಯವೆಂಬ ಅಮೃತವು ಅದರಲ್ಲಿ ತುಂಬಿಕೊಂಡಿದೆ. ಅಥವಾ ಭರತನಾಟ್ಯವೆಂಬ ಕಲಾಮಾಧ್ಯಮವನ್ನು ಪಾತ್ರೆಯೆಂದು ಭಾವಿಸುವುದಾದರೂ ನನ್ನ ಹೆಣ್ತನದ ಅಸ್ತಿತ್ವವು ಅದರಲ್ಲಿ ತುಂಬಿಕೊಂಡಿದೆ.

ನಮ್ಮೂರಿನಲ್ಲಿ ನಮ್ಮ ಕುಟುಂಬವು ಬಹಳ ಪ್ರತಿಷ್ಠಿತವಾದುದಾಗಿತ್ತು. ಲೇವಾದೇವಿಗಾರರು, ಕೃಷಿಕರು, ಜವಳಿ ವ್ಯಾಪಾರಿಗಳಾಗಿ ಗಟ್ಟಿ ಕುಳಗಳೆಂದೇ ಗುರುತಿಸಿಕೊಂಡ ಕುಟುಂಬ ನಮ್ಮದು. ಅವರಿಗೆ ಯಾವುದೇ ಕಲಾಪ್ರಕಾರಗಳ ಕಿಂಚಿತ್ ಪರಿಚಯವೂ ಇರಲಿಲ್ಲ. ಐದು ತಲೆಮಾರಿಗಿಂತಲೂ ಹಿಂದಿನ ಪರಂಪರೆಯನ್ನು ಅನುಸರಿಸಿಕೊಂಡು ಬಂದಿರುವ, ಮೇಲ್ವರ್ಗಕ್ಕೆ ಸೇರಿದ ನಮ್ಮ ಕುಟುಂಬದಲ್ಲಿ ಆಚಾರ ವಿಚಾರಗಳು ಕಟ್ಟುನಿಟ್ಟಾಗಿದ್ದವು. ಮಧುರೈ ಬಹಳ ಪುರಾತನವಾದ ನಗರ. ಮಧುರೈ ಮೀನಾಕ್ಷಿಯಮ್ಮನಿಗೆ ನಡೆದುಕೊಳ್ಳುವ ಊರುಗಳಲ್ಲಿ ಒಂದಾಗಿರುವ ಅಣುಪ್ಪಾನಡಿ ಎಂಬಲ್ಲಿ ನಾನು ಹುಟ್ಟಿದೆ. ಕಲೆಯ ಗಂಧಗಾಳಿ ಇಲ್ಲದ ಊರಿನಿಂದ ಬಂದ ನಾನು ಇಂದು ಪದ್ಮಶ್ರೀ ಪುರಸ್ಕಾರ ಪಡೆದ ಕಲಾವಿದೆಯಾಗಿದ್ದರೂ, ನಮ್ಮೂರಿನಲ್ಲಿ ಅದೊಂದು ದೊಡ್ಡ ಸಾಧನೆಯೆಂದು ಯಾರಿಗಾದರೂ ಅನಿಸಿದೆಯೋ ಇಲ್ಲವೋ ಗೊತ್ತಿಲ್ಲ. ನಾನು ನಮ್ಮೂರನ್ನು ದೂರುತ್ತಾ ಇಲ್ಲ. ಕಲೆಯ ಬಗ್ಗೆ ಹೆಚ್ಚು ತಲೆಯೇ ಕೆಡಿಸಿಕೊಳ್ಳದ ಆ ಊರಿನಲ್ಲಿ ನನಗೆ ಮಾತ್ರ ಭರತನಾಟ್ಯದ ಗುಂಗು ಹೇಗೆ ಹಿಡಿಯಿತು ಎಂದು ಆಗಾಗ ವಿಸ್ಮಯಗೊಳ್ಳುತ್ತೇನೆ. ನಾನು ಹೀಗೆ ರೂಪುಗೊಂಡದ್ದಕ್ಕೆ ದೇವರಿಗೆ ಕೃತಜ್ಞತೆ ಹೇಳುತ್ತಾ ಇರುತ್ತೇನೆ.

ನಮ್ಮೂರಿನಲ್ಲಿ ಒಂದು ದೇವಸ್ಥಾನ, ಅದರ ಸುತ್ತ ವಿಶಾಲವಾದ ಅಂಗಣ ಮತ್ತು ಆಟದ ಬಯಲಿತ್ತು. ದೇವಸ್ಥಾನದ ಬದಿಯಲ್ಲಿಯೇ ಸುಂದರವಾದ ಕುಬ್ಜವಾದ ಒಂದು ಆಲದ ಮರವಿದ್ದು, ಮಕ್ಕಳೆಲ್ಲ ಅದರ ಸುತ್ತ ಆಡುತ್ತಿದ್ದರು. ನಾನು ಬಾಲ್ಯದಲ್ಲಿ ಆ ಮರದ ಸುತ್ತ ಆಟವಾಡುವ ಮಕ್ಕಳೊಡನೆ ಸೇರಿಕೊಳ್ಳೋಣವೆಂದು ಹೋದರೆ ಎಲ್ಲರೂ ನನ್ನನ್ನು ದೂರ ಅಟ್ಟಿಬಿಡುತ್ತಿದ್ದರು. ಇನ್ನೇನು ಮಾಡುವುದು, ಅಳುತ್ತಾ ದೇವಸ್ಥಾನದ ಒಳಗಿನ ಅಂಗಣಕ್ಕೆ ಪ್ರವೇಶಿಸಿ, ಅಲ್ಲಿನ ದೊಡ್ಡ ಕಂಬಗಳನ್ನು ಕೆತ್ತನೆಗಳನ್ನು ನೋಡುತ್ತಿದ್ದೆ. ಕೆನ್ನೆಯ ಮೇಲಿನ ಕಣ್ಣೀರು ಹಾಗೆಯೇ ಒಣಗಿ ಹೋಗುತ್ತಿತ್ತು. ಭದ್ರಕಾಳಿ, ದ್ವಾರಪಾಲಕ ಶಿಲ್ಪಗಳು, ಲಿಂಗೋದ್ಭವ, ನಟರಾಜ ಮುಂತಾದ ಮೂರ್ತಿಗಳನ್ನು ನೋಡುತ್ತಾ ಸಾಗುತ್ತಿದ್ದೆ. ಅಂದಹಾಗೆ, ಮಧುರೈಯಲ್ಲಿ ಮಾತ್ರ ನಟರಾಜ ಬಲಗಾಲನ್ನು ಎತ್ತಿ ಎಡಗಾಲಿನ ಬಳಿ ತಂದು ನಾಟ್ಯಭಂಗಿಯಲ್ಲಿ ನಿಂತಿರುವ ಶಿಲ್ಪವಿದೆ. ಶಿಲ್ಪಗಳ ಭಂಗಿಗಳನ್ನು ಸೂಕ್ಷ್ಮವಾಗಿ ನೋಡುವುದು ನನ್ನ ಹವ್ಯಾಸವೇ ಆಗಿತ್ತು.

ಇದೇ ಸಮಯದಲ್ಲಿ ನಮ್ಮ ಊರಿಗೆ ಟೂರಿಂಗ್ ಟಾಕೀಸ್ ಬಂತು. ಅಲ್ಲಿ ಪ್ರತೀದಿನ ಹಳೇ ಕಾಲದ ಕಪ್ಪುಬಿಳುಪಿನ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು. ಅದು 80ರ ದಶಕವಾದರೂ ಟೂರಿಂಗ್ ಟಾಕೀಸ್‌ನಲ್ಲಿ ಕುಮಾರಿ ಕಮಲಾ, ಪದ್ಮಿನಿ, ವೈಜಯಂತಿ ಮಾಲಾ, ಸಾಯಿ ಸುಬ್ಬುಲಕ್ಷ್ಮಿ ಮುಂತಾದವರ ನೃತ್ಯಗಳಿರುತ್ತಿದ್ದ, ಬಹಳ ಹಳೆಯದಾದ ಕಪ್ಪುಬಿಳುಪು ಸಿನಿಮಾಗಳನ್ನು ತೋರಿಸುತ್ತಿದ್ದರು. ಸಿನಿಮಾ ಪ್ರದರ್ಶನ ಸಂಜೆಗೆ ಇರುತ್ತಿತ್ತು. ಆದರೆ ನಾನು ಸಿನಿಮಾದಲ್ಲಿ ನೋಡಿದ ಡಾನ್ಸನ್ನು ದಿನವಿಡೀ ಅದೇ ವೇದಿಕೆಯಲ್ಲಿ ಕಲಿಯುತ್ತಿದ್ದೆ. ಹಸಿವು ನೀರಡಿಕೆಯ ಹಂಗಿಲ್ಲದೆ ತನಗೆ ತಾನೇ ಎಂಬಂತೆ ನರ್ತಿಸುತ್ತಿದ್ದೆ. ಅಲ್ಲಿ ನನ್ನನ್ನು ಯಾರೂ ಕ್ಯಾರೇ ಅನ್ನುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಪಕ್ಕದ ಹಳ್ಳಿಯ ಮತ್ತೊಬ್ಬ ಹುಡುಗ ನನಗೆ ಪರಿಚಯವಾದ.